**<u>ದಿನಾಂಕಃ 31.01.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್. ವಿ. ಎನ್. ಕೆ. ವಕೀಲರಿಂದಃ</u>**

ನನ್ನ ಅಣ್ಣನ ಹೆಸರು ಪ್ರಕಾಶ್ ಆಗಿರುತ್ತದೆ. ಅವರು ಎಸ್. ಎಸ್. ಎಲ್. ಸಿ. ಯವರೆಗೆ ಓದಿರುತ್ತಾರೆ. ನಾನು ಮತ್ತು ನನ್ನ ಅಣ್ಣ ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ. ನಾನು ಮತ್ತು ನನ್ನ ಅಣ್ಣ ಅನ್ಯೋನ್ಯವಾಗಿರುತ್ತೇವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಷ್ಟೇನು ಇಲ್ಲ ಎಂದು ಹೇಳುತ್ತಾರೆ. ನನ್ನ ಅಣ್ಣ ಸೆಂಟ್ರಿಂಗ್ ಕೆಲಸ ಮಾಡುತ್ತಾರೆ.

ದಾವಾ ಸ್ವತ್ತಿನ ಖಾತೆ, ಪಹಣಿ ಚಿನ್ನಮ್ಮಯ್ಯ ಹೆಸರಿಗೆ ಬರುತ್ತಿದೆ. ಸಾಕ್ಷಿ ಮುಂದುವರಿದು ದಾವಾ ಸ್ವತ್ತು ಗುರಪ್ಪನ ಎಲ್ಲಾ ವಾರಸುದಾರರಿಗೆ ಬರುವ ಸ್ವತ್ತು ಎಂದು ಹೇಳುತ್ತಾರೆ ಮತ್ತು ಚಿನ್ನಮ್ಮಯ್ಯ ಒಬ್ಬರೇ ವಾರಸುದಾರರು ಅಲ್ಲ ಎಂದು ಹೇಳುತ್ತಾರೆ. ಚಿನ್ನಮ್ಮಯ್ಯ ಹೆಸರಿಗೆ ದಾವಾ ಸ್ವತ್ತಿನ ಖಾತೆ, ಪಹಣಿ ಇರುವುದು ಈ ದಾವೆ ಹಾಕಿದ ನಂತರ ನನ್ನ ಗಮನಕ್ಕೆ ಬಂದಿರುತ್ತದೆ. ಮೊದಲಿಗೆ ಈ ದಾವೆ ಮಾಲೂರು ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ನಂತರ ಇಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. 2013 ರಲ್ಲಿ ಅಸಲು ದಾವೆ ಸಂಖ್ಯೆಃ 576/2013 ಮಾಲೂರು ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು ಎಂದರೆ ಸರಿ. 2013 ರಲ್ಲಿ ದಾವಾ ಸ್ವತ್ತಿನ ಖಾತೆ , ಪಹಣಿ ಚಿನ್ನಮ್ಮಯ್ಯ ಹೆಸರಿಗೆ ಇರುವುದು ನನಗೆ ಗೊತ್ತಿರಲಿಲ್ಲ. ನಾನು ಗುರಪ್ಪನ ವಾರಸುದಾರ ಅಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣ ಪ್ರಕಾಶ್ ಓದಿರುವುದು ಭಂಟಹಳ್ಳಿ ಗ್ರಾಮದಲ್ಲಿ . ನನ್ನ ಅಣ್ಣನ ಜನ್ಮ ದಿನಾಂಕ ನನಗೆ ನೆನಪಿರುವುದಿಲ್ಲ. ನನ್ನ ಮಾತೃ ಭಾಷ್ಷೆ ತೆಲುಗು ಆಗಿರುತ್ತದೆ. 1988 ರಲ್ಲಿ ನಾನು ಮತ್ತು ನನ್ನ ಅಣ್ಣ ದೊಂಬರಪಾಳ್ಯದಲ್ಲಿ ವಾಸವಾಗಿದ್ದೆವು ಎಂದರೆ ಸರಿ. ಸಾಕ್ಷಿಗೆ ಶಾಲಾ ದಾಖಲಾತಿ ಪುಸ್ತಕದ ದೃ. ನಕಲನ್ನು ತೋರಿಸಲಾಗಿ, ಅದರಲ್ಲಿರುವ ಪ್ರಕಾಶ್ ತಂದೆ-ಈರಪ್ಪ,

ಜಾತಿ-ದೊಂಬರು, ಮಾತೃ ಭಾಷ್ಷೆ - ತೆಲುಗು ಎಂದು ನಮೂದಿಸಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಅಣ್ಣನ ಹೆಸರು ಪ್ರಕಾಶ್, ತಂದೆಯ ಹೆಸರು ಮಾರಪ್ಪ, ಜಾತಿ-ದೊಂಬರು ಸರಿ ಇರುತ್ತದೆ, ನಮ್ಮ ಮಾತೃ ಭಾಷೆ ತೆಲುಗು ಇರುತ್ತದೆ , ಆದರೆ ನಮ್ಮ ಅಣ್ಣನ ತಂದೆಯ ಹೆಸರು ಈರಪ್ಪ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆ ನನ್ನ ಅಣ್ಣನಿಗೆ ಶಾಲೆಗೆ ಸೇರಿಸುವಾಗ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣ ಈರಪ್ಪನ ಮಕ್ಕಳು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಪಿಳ್ಳಮ್ಮ ಎಂದು ಆಗಿರುತ್ತದೆ. ನನ್ನ ತಾಯಿಗೆ ಪಿಳ್ಳಕ್ಕ ಎಂದೂ ಸಹ ಕರೆಯುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ಈರಪ್ಪನಿಗೆ ಪಿಳ್ಳಮ್ಮ ಹೆಂಡತಿಯಾಗಿದ್ದು , ಅವರಿಗೆ ಪ್ರಕಾಶ್ ಮತ್ತು ನಾನು ಮಕ್ಕಳು ಎಂದರೆ ಸರಿಯಲ್ಲ. ನನ್ನ ತಂದೆ ಮಾರಪ್ಪ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುವುದು ನನಗೆ ನೆನಪಿಲ್ಲ.

ನನ್ನ ತಾಯಿ ಪಿಳ್ಳಮ್ಮನ ಸ್ವಂತ ಊರು ದೊಂಬರಪಾಳ್ಯ. ನನ್ನ ತಾಯಿಯ ತಂದೆಯ ಹೆಸರು ಕೆಂಚಪ್ಪ. ಕೆಂಚಪ್ಪನಿಗೆ ಇಬ್ಬರು ಮಕ್ಕಳು. ಅವರೆಂದರೆ ಚಂದ್ರಪ್ಪ ಮತ್ತು ಪಿಳ್ಳಮ್ಮ. ಪಿಳ್ಳಮ್ಮನಿಗೆ ಪಡವನಹಳ್ಳಿ ಈರಪ್ಪನ ಜೊತೆ ಮದುವೆಯಾಗಿತ್ತು ಎಂದರೆ ಸರಿಯಲ್ಲ. ನಾನು, ಮಾದೇಶ್ ಮತ್ತು ಪ್ರಕಾಶ್ ಪಡುವನಹಳ್ಳಿ ಈರಪ್ಪನ ಮಕ್ಕಳು ಎಂದರೆ ಸರಿಯಲ್ಲ. ಪಡುವನಹಳ್ಳಿ ಈರಪ್ಪ ಒಕ್ಕಲಿಗರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ದೊಂಬರು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾಯಿ ಅಂತರ್ ಜಾತಿ ವಿವಾಹ ಈರಪ್ಪನ ಜೊತೆ ಮಾಡಿಕೊಂಡಿದ್ದು, ನಾನು, ಪ್ರಕಾಶ್ ಮತ್ತು ಮಾದೇಶ್ ಅವರ ಮಕ್ಕಳು ಎಂದರೆ ಸರಿಯಲ್ಲ.

ನನ್ನ ಜನ್ಮ ದಿನಾಂಕ ನನಗೆ ನೆನಪಿಲ್ಲ. ಚುನಾವಣಾ ಮತದಾರರ ಪಟ್ಟಿಯಲ್ಲಿ ಈರಪ್ಪನ ಮಕ್ಕಳು ಎಂದು ನನ್ನ, ಮತ್ತು ನನ್ನ ಅಣ್ಣ-ತಮ್ಮಂದಿರ ಹೆಸರು

ನಮೂದಾಗಿರುತ್ತದೆ ಎಂದರೆ ಸುಳ್ಳು. 1995 ರಲ್ಲಿ ನನ್ನ ತಾಯಿ ಪಿಳ್ಳಮ್ಮ, ಗಂಡ-ಈರಪ್ಪ ಎಂದು ಮತ ಚಲಾಯಿಸಿರುತ್ತಾರೆ ಎಂದರೆ ಸುಳ್ಳು. ನಾನು ಮಾರಪ್ಪನ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ಸರಕಾರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹುಟ್ಟಿದಾಗಿನಿಂದ ನನ್ನ ಹೆಸರಿಗೆ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.

sd/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**